# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 57 / 2019

ಸಿಡಬ್ಲ್ಯೂ- 27
ಪಿಡಬ್ಲ್ಯೂ- 13

ದಿನಾಂಕಃ **26.06.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | |
|---|---|
| ಸಾಕ್ಷಿಯ ಹೆಸರುಃ | - ಸಣ್ಣ ಲಕ್ಷ್ಮೀ |
| ಗಂಡನ ಹೆಸರುಃ | - ಸಣ್ಣ ತಾಯಪ್ಪ |
| ವಯಸ್ಸುಃ | -? 50 ವರ್ಷ |
| ಉದ್ಯೋಗಃ | - ಕೂಲಿ ಕೆಲಸ. |
| ವಾಸಸ್ಥಳಃ | - ಕೋಟಗೇರಾ ಗ್ರಾಮ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಮೃತ ಬಸವರಾಜ ನನ್ನ ಮಗನಾಗಬೇಕು ಆತನು ಚಾಲಕ ಕೆಲಸ ಮಾಡುತ್ತಿದ್ದನ್ನು. ಕಳೆದ 7 ವರ್ಷಗಳ ಹಿಂದೆ ನನ್ನ ಮಗನು ಗಾಜರಕೋಟದಿಂದ ಯಾದಗಿರಿಗೆ ಬರುತ್ತಿದ್ದಾಗ ಮುಂಡರಗಿ ಹತ್ತಿರ ಒಂದು ಬೂದಿ ಟ್ಯಾಂಕರ್ ಯಾದಗಿರಿ ಕಡೆಯಿಂದ ಬಂದು ನನ್ನ ಮಗನು ಚಲಾಯಿಸುತ್ತಿದ್ದ ಜೀಪಿಗೆ ಡಿಕ್ಕಿಪಡಿಸಿರುತ್ತದೆ. ಸದರಿ ಅಪಘಾತದಿಂದ ಸ್ಥಳದಲ್ಲಿ ಮೂರು ಜನರು ಮೃತಪಟ್ಟಿದ್ದರು. ಸದರಿ ಮೂರು ಜನರಲ್ಲಿ ನನ್ನ ಮಗನು ಸಹ ಮೃತಪಟ್ಟಿದ್ದನ್ನು ಅಪಘಾತದ ವಿಷಯವನ್ನು ನನ್ನ ಹಿರಿಯ ಮಗನಾದ ಶರಣಪ್ಪ ಚಾಸಾ-14 ರವರಿಗೆ ಫೋನ್ ಮುಖಾಂತರ ತಿಳಿಸಿದ್ದರು. ನಂತರ ಚಾಸಾ-14 ರವರು ಅಪಘಾತದ ವಿಷಯವನ್ನು ನನಗೆ ತಿಳಿಸಿದ್ದರು. ನಂತರ ನಾವು ಅಪಘಾತ ಸ್ಥಳಕ್ಕೆ ಹೋಗಿದ್ದೇವು ಆದರೆ ಅಲ್ಲಿಂದ ನನ್ನ ಮಗನನ್ನು ಯಾದಗಿರಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಆ ನಂತರ ನಾನು ಹಾಗೂ ನನ್ನ ಗಂಡ ಚಾಸಾ-26 ರವರು ಮತ್ತು ಚಾಸಾ-14 ರವರು ಕೂಡಿ ಆಸ್ಪತ್ರೆಗೆ ಬಂದ್ದೇವು. ಅಪಘಾತ ಆದ ವಿಷಯ ನನಗೆ ಗೊತ್ತಾಯಿತು. ನನ್ನ ಮಗನು ಗಾಜರಕೋಟ ದೇವಸ್ಥಾನಕ್ಕೆ ಹೋಗಿ ಮರಳಿ ಯಾದಗಿರಿಗೆ ಬರುವಾಗ ಬೂದಿ ಟ್ಯಾಂಕರ್ ಬಂದು ನನ್ನ ಮಗನು ಚಲಾಯಿಸುತ್ತಿದ್ದ ಜೀಪಿಗೆ ಡಿಕ್ಕಿಪಡಿಸಿತ್ತು. ಸದರಿ ಅಪಘಾತದಲ್ಲಿ 4 ಜನರು ಮೃತಪಟ್ಟಿದ್ದರು. ಸದರಿ ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿತ್ತು ಎಂದು ನನಗೆ ಗೊತ್ತಾಯಿತು. ಅಪಘಾತದ ವಿಷಯವನ್ನು ಅಪಘಾತದಲ್ಲಿ ಇದ್ದರು ನನಗೆ ತಿಳಿಸಿದ್ದರು ಅವರು

ಹೆಸರು ನನಗೆ ನೆನಪಿರುವುದಿಲ್ಲ. ಪೊಲೀಸರ ಮುಂದೆ ನಾನು ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ನಾವು ಆಸ್ಪತ್ರೆಗೆ ಬಂದಾಗ ಚಾಸಾ-1 ರವರು ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸರಿ. ನಾವು ಚಾಸಾ-1 ರವರಿಗೆ ವಿಚಾರಣೆ ಮಾಡಿದ್ದಾಗ ಅವರು ನಾವು ಸಾಯಂಕಾಲ 6 ಗಂಟೆಗೆ ಕಮಾಂಡರ್ ಜೀಪಿನಲ್ಲಿ ಗಾಜರಕೋಟ ಚರ್ಚ್ ನಲ್ಲಿ ನಡೆಯುವ ಪ್ರಾರ್ಥನಾ ಕೂಟಕ್ಕೆ ಹೋಗಿದ್ದೇವು ಆವಾಗ ಸದರಿ ಜೀಪಿನು ಬಸವರಾಜ್ ನಡೆಸುತ್ತಿದ್ದನ್ನು ಎಂದು ನನಗೆ ಹೇಳಿದ್ದರು ಎಂದರೆ ಸರಿ. ಪ್ರಾರ್ಥನೆ ಕೂಟ ಮುಗಿದ ನಂತರ ಯಾದಗಿರಿಗೆ ಬರುವ ಸಮಯದಲ್ಲಿ ರಾತ್ರಿ 10 ಗಂಟೆಗೆ ನಾವು ಮುಂಡರಗಿ ಹತ್ತಿರ ಬರುತ್ತಿದ್ದಾಗ ನಮ್ಮ ಎದುರುಗಡೆ ಯಾದಗಿರಿ ಕಡೆಯಿಂದ ಒಂದು ಬೂದಿ ಟ್ಯಾಂಕರ್ ಚಾಲಕನು ತನ್ನ ವಾಹನವನ್ನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ನಡೆಸಿಕೊಂಡು ಬಂದು ನಮ್ಮ ಜೀಪಿಗೆ ಜೋರಾಗಿ ಡಿಕ್ಕಿಹೊಡೆದು ಅಪಘಾತ ಪಡಿಸಿದ್ದನ್ನು ಎಂದು ನನಗೆ ತಿಳಿಸಿದ್ದರು ಎಂದರೆ ಸರಿ. ಇದರಲ್ಲಿ ಚಾಸಾ-1 ರವರ ಗಂಡನಾದ ಜಾನ್ ಪಾಲ್, ಎಲಿಜಿಬೆತ್ ಮತ್ತು ಜೀಪಿ ಚಾಲಕ ನನ್ನ ಮಗ ಸ್ಥಳದಲ್ಲಿ ಮೃತಪಟ್ಟಿದ್ದನ್ನು ಎಂದು ನನಗೆ ತಿಳಿಸಿದ್ದರು ಎಂದರೆ ಸರಿ. ನಂತರ ಉಪಚಾರ ಕುರಿತು ಆಸ್ಪತ್ರೆಗೆ ತರುವಾಗ ಚಾಸಾ-1 ರವರ ಮಗ ಸ್ಟೀಪನ್ ಪೀಟರ್ ಇವರು ಸಹ ಮೃತಪಟ್ಟಿದ್ದು ಎಂದು ನನಗೆ ತಿಳಿಸಿದ್ದರು ಎಂದರೆ ಸರಿ. ಸದರಿ ಅಪಘಾತವು ಬೂದಿ ಟ್ಯಾಂಕರ್ ನಂಃ ಕೆಎ-22-ಬಿ-7049 ನೇದ್ದರ ಚಾಲಕನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿದ ಕಾರಣ ಈ ಅಪಘಾತ ಆಗಿರುತ್ತದೆ ಎಂದು ನನಗೆ ತಿಳಿಸಿದ್ದರು ಎಂದರೆ ಸಾಕ್ಷಿಯು ಅವರು ಕೇವಲ ಗುದ್ದಿರುತ್ತದೆ ಎಂದು ನನಗೆ ತಿಳಿಸಿದ್ದರು ಆದರೆ ಟ್ಯಾಂಕರ್ ವಾಹನ ನಂಬರ ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ಟ್ಯಾಂಕರ ವಾಹನದ ಸಂಖ್ಯೆ ನಮೂದಿಸಿ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಕುರಿತು ದಿನಾಂಕಃ 02.06.2018 ರಂದು "ಈ ಅಪಘಾತವು ಬೂದಿ ಟ್ಯಾಂಕರ ನಂಬರ ಕೆಎ-22-ಬಿ-7049 ---------------------------------------------------------------------ಅಂತಾ ಹೇಳಿ ಟೈಪ್ ಮಾಡಿಸಿದ ಹೇಳಿಕೆ ಈ ರೀತಿಯಾಗಿ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭಾಗಶಃ ಹೇಳಿಕೆಯನ್ನು ನಿಪಿ 14 ಎಂದು ಗುರುತಿಸಲಾಯಿತು. ನಿಪಿ 14 ರಂತೆ ಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಲು ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಆರ್.ರವರಿಂದಃ

ನನ್ನ ಮಗನು ಎಷ್ಟನೇಯತರಗತಿಯ ವರೇಗೆ ಓದಿದ್ದನ್ನು ಎಂದು ನನಗೆ ನೆನಪಿರುವುದಿಲ್ಲ. ನನ್ನ ಮಗನು ಬೇರೆಯವರ ಜೀಪನ್ನು ಚಲಾಯಿಸುತ್ತಿದ್ದನ್ನು. ನನ್ನ ಮಗನು ಜೀಪನ್ನು ಚಲಾಯಿಸಲು ಚಾಲನಾ ಪರವಾನಿಗೆ ಪತ್ರವನ್ನು ಹೊಂದಿದ್ದನೋ ಅಥವಾ ಇಲ್ಲ ಎಂದು ನನಗೆ ಗೊತ್ತಿರುವುದಿಲ್ಲ ಸದರಿ ಜೀಪನಲ್ಲಿ 8-10 ಜನರು ಇದ್ದರು. ಈ ಮೊದಲು ಜೀಪನಲ್ಲಿ ಇದ್ದ ವ್ಯಕ್ತಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಜನರು ಹೇಳಿದ್ದರಿಂದ ನನಗೆ ಜೀಪಿನಲ್ಲಿ 8-10 ಇದ್ದರು ಎಂದು ಗೊತ್ತಾಯಿತು. ಬೂದಿ ಟ್ಯಾಂಕರ ನನ್ನ ಮಗನ ಜೀಪಿಗೆ ಡಿಕ್ಕಿಪಡಿಸಿದ್ದರಿಂದ ನನ್ನ ಮಗನು ಮೃತಪಟ್ಟಿರುತ್ತಾನೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಟ್ಯಾಂಕರ ನಂಬರ ನನಗೆ ಗೊತ್ತಿರುವುದಿಲ್ಲ ಮತ್ತು ಅದನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಯಾಂದಿಗೂ ಸಹ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನನ್ನ ಮಗನು ಚಾಲನಾ ಪರವಾನಿಗೆ ಪತ್ರವನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಕಮಾಂಡರ ಜೀಪು ವಿಮೆಗೆ ಒಳಪಟ್ಟಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಪರಿಹಾರವನ್ನು ಪಡೆಯುವ ಸಲುವಾಗಿ ಬೂದಿ ಟ್ಯಾಂಕರ ವಿಮೆಗೆ ಒಳಪಟ್ಟಿದ್ದನ್ನು ಉಪಯೋಗಿಸಿಕೊಂಡು ಅದರಿಂದ ಅಪಘಾತ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.